Reg.No. M. 1550.
"KODAGU" MERCARA, (Coorg).

-19-

ಕೊಡಗು

ಸಂಪಾದಕರು:–ಶ್ರೀ ಪಿ. ಐ. ಬೆಳ್ಯಪ್ಪ, ವಾರ್ಷಿಕ ಚಂದಾ: ರೂ: ೩–೮–೦.

ಪುಟ ೨೬ | ತಾರೀಕು ೬—೧೦—೧೯೪೪ನೇ ಶುಕ್ರವಾರ. | ಸಂಚಿಕೆ ೧೯

ಗಾಂಧಿ-ಜಿನ್ನಾ ಪತ್ರವ್ಯವಹಾರ

ಗಾಂಧಿ ಜಿನ್ನಾ ಭೇಟಿಯು ಸೆಪ್ಟೆಂಬರ್ ತಾ. 9ರಲ್ಲಿ ಪ್ರಾರಂಭವಾಗಿತು. 10ನೇ ತಾರೀಕಿನಲ್ಲಿ ಜಿನ್ನಾರವರು ಹೀಗೆ ಬರೆದರು–'ಹಿಂದೂ ಮುಸ್ಲಿಂ ಐಕ್ಯದ ಬಗ್ಗೆ ಮಾತಾಡಲು ನೀವು ನಿನ್ನು ವಯಕ್ತಿಕ ಜವಾಬ್ದಾರಿಯ ಮೇಲೆ ಬಂದಿದ್ದೀರಿ. ಹಿಂದೂಗಳ ಯಾ ಕಾಂಗ್ರೆಸಿನ ಪ್ರತಿನಿಧಿಯಾಗಿ ನೀವು ಬಂದಿಲ್ಲ. ಹಾಗೆ ಬರಲು ನಿಮಗೆ ಅಧಿಕಾರವಿಲ್ಲ. ಆದ್ದರಿಂದ ನನಗೆ ಕಷ್ಟವಾಗಿದೆ. ನಾನು ಮುಸ್ಲಿಂ ಲೀಗಿನ ಪ್ರತಿನಿಧಿಯಾಗಿರುವೆನು. ಆದ್ದರಿಂದ ಆ ಸಂಸ್ಥೆಯ ಧಾರಣೆ, ನಿಯಮಗಳಿಗನುಗುಣವಾಗಿ ಮಾತಾಡಬೇಕಿದೆ. ಲಾಹೋರಿನಲ್ಲಿ ಮುಸ್ಲಿಂ ಲೀಗು ಮಾಡಿದ ಗೊತ್ತುವಳಿಯನ್ನು ವಿವರಿಸಿದ್ದೇನೆ. ಅದನ್ನು ನೀವು ಪರಿಶೀಲಿಸದೆ 'ನನಗೂ ನಿಮಗೂ ಸಾಗರದಷ್ಟು ಭೇದವಿದೆ' ಎಂದು ಹೇಳಿದಿರಿ. ನೀವು ಇದಕ್ಕೆ ಪ್ರತಿಯಾಗಿ ನಮ್ಮ ಅಂಗೀಕಾರ ಪಡೆದ ರಾಜಾಜಿ ಯೋಜನೆಯನ್ನು ಮುಂದಿಟ್ಟಿರಿ. ಇದರಲ್ಲಿ ಸಂಶಯದ ಅನೇಕ ವಿಚಾರಗಳಿವೆ. ಸ್ವತಂತ್ರ ಭಾರತಕ್ಕೆ ಬೇಕಾದ ರಾಜ್ಯಾಂಗ ರಚನೆ ಯಾವುದು? ಅದನ್ನು ರಚಿಸುವವರು ಯಾರು? ತಾತ್ಕಾಲಿಕವಾಗಿ ಸ್ಥಾಪಿಸಲ್ಪಡುವ ರಾಷ್ಟ್ರೀಯ ಸರಕಾರವು ಯಾವ ಆಧಾರದ ಮೇಲೆ ರಚಿಸಲ್ಪಡುವದು. ಬ್ರಿಟಿಷರು ಯಾರಿಗೆ ಅಧಿಕಾರ ಪಹಿಸಿಕೊಡಬೇಕು? ಯಾಕಾಗಿ?' ಎಂದು ಪತ್ರದಲ್ಲಿ ಪ್ರಶ್ನೆಯೆತ್ತಿದರು.

ಗಾಂಧೀಜಿಯವರು ಈ ರೀತಿ ಬರೆದರು–'ನನ್ನ ಜೀವನವೆಲ್ಲಾ ಹಿಂದೂ ಮುಸ್ಲಿಂ ಐಕ್ಯಕ್ಕಾಗಿಯೇ ಆಗಿದೆ. ಅದನ್ನು ಸಾಧಿಸಬೇಕಾದರೆ ವಿದೇಶೀ ಆಳರಸರು ಹೋದ ಹೊರತು ಸಾಧ್ಯವಿಲ್ಲ. ಆತ್ಮ ನಿರ್ಣಯ ಹಕ್ಕನ್ನು ಪಡೆಯಲು ಮೊದಲನೇಯದಾಗಿ ಭಾರತದಲ್ಲಿಯ ಎಲ್ಲಾ ಪಕ್ಷಗಳ ಮತ್ತು ಗುಂಪುಗಳ ಸಂಯುಕ್ತ ಪ್ರಯತ್ನವಾಗಬೇಕು. ನಾನು ಪ್ರತಿನಿಧಿಯಾಗಿ ಬಂದಿಲ್ಲವೆಂದು ಹೇಳಿದ ಮೇಲೂ ಕೂಡ ನೀವು ಮಾತುಕತೆಗಳನ್ನು ನಿಲ್ಲಿಸಿ ಬಿಡದೆ ಹೋದುದಕ್ಕಾಗಿ ನಾನು ಸಂತೋಷಿಸುತ್ತೇನೆ. ನಿಮ್ಮ ಭಾವನೆಗೂ, ನನ್ನ ಭಾವನೆಗೂ ಸಾಗರದಷ್ಟು ವ್ಯತ್ಯಾಸವಿದೆಯೆಂದು ನಿಜ. ಲಾಹೋರಿನಲ್ಲಾದ ನಿರ್ಣಯವು ಸ್ಪಷ್ಟವಾಗಿಲ್ಲ. ರಾಜಾಜಿಯ ಯೋಜನೆಯು ಆ ನಿರ್ಣಯದ ಸಾರ. ಸ್ವಾತಂತ್ರ್ಯವೆಂದರೆ ಇಡೀ ಭಾರತಕ್ಕೆ ಅನ್ವಯಿಸುವದು. ತಾತ್ಕಾಲಿಕ ಸರಕಾರವನ್ನು ರಚಿಸುವ ಅಂಶದಲ್ಲಿ ಕಾಂಗ್ರೆಸು ಮತ್ತು ಮುಸ್ಲಿಂ ಲೀಗು ಒಪ್ಪಂದಕ್ಕೆ ಬರಬೇಕು. ಆಡಳಿತಾಧಿಕಾರವನ್ನು ರಾಷ್ಟ್ರಕ್ಕೆ ವರ್ಗಾಯಿಸಬೇಕೆಂದರೆ ತಾತ್ಕಾಲಿಕ ಸರಕಾರಕ್ಕೆ ವರ್ಗಾಯಿಸಬೇಕು.'

ಸೆಪ್ಟೆಂಬರ್ 11ರಲ್ಲಿ ಜಿನ್ನಾರವರು ಮತ್ತೊಂದು ಪತ್ರ ಬರೆದು, 'ನಿಮ್ಮೊಡನೆ ನಾನು ಚರ್ಚಿಸುವ ಉದ್ದಿಶ್ಯವೆಂದರೆ ನಿಮ್ಮನ್ನು ನನ್ನ ಭಾವನೆಗೆ ಪರಿವರ್ತಿಸುವುದೇ ಆಗಿದೆ. ಭಾರತ ಸಮಸ್ಯೆಯ ಪರಿಹಾರಕ್ಕೆ ಇದೊಂದೇ ಮಾರ್ಗ. ಲಾಹೋರಿನಲ್ಲಿ 1940ರಲ್ಲಾದ ನಿರ್ಣಯದಂತೆ ಹಿಂದೂಸ್ಥಾನವನ್ನು ವಿಭಜಿಸುವದು. ರಾಜಾಜಿಯವರು ಈ ನಿರ್ಣಯದ ಮೇಲೆ ತಮ್ಮ ಯೋಜನೆಯನ್ನು ರೂಪಿಸಿದ್ದಾರೆಂಬುವುದನ್ನು ನಂಬಲಾರೆ. ಬದಲು ಅದರ ರೂಪುಗೆಡಿಸಿದ್ದಾರೆ. ಎರಡು ಪಂಗಡಗಳು ಸೇರಿ ಸ್ವಾತಂತ್ರ್ಯಕ್ಕೆ ಹೋರಾಡಬೇಕೆನ್ನುವಿರಿ. ಇದು ಕುದುರೆಗಳನ್ನು ಗಾಡಿಯ ಹಿಂದೆ ಕಟ್ಟಿದಂತೆ. ಭಾರತಕ್ಕೆ ಸ್ವಾತಂತ್ರ್ಯ ಲಭಿಸಬೇಕಾದರೆ ಮೊದಲು ಹಿಂದೂ ಮುಸ್ಲಿಂ ಐಕ್ಯವಾಗಬೇಕು.' ಎಂದು ಸೂಚಿಸಿದರು.

ಸೆಪ್ಟೆಂಬರ್ 14ರಲ್ಲಿ ಗಾಂಧೀಜಿಯವರು 'ನಮ್ಮ ಚರ್ಚೆಯೆಲ್ಲಾ ಮುಗಿವ ಹೊತ್ತಿಗೆ ನಿಮಗೆ ವ್ಯಕ್ತವಾಗುವದು ರಾಜಾಜಿಯವರು ಲಾಹೋರು ನಿರ್ಣಯವನ್ನು ರೂಪುಗೆಡಿಸಿಲ್ಲವೆಂಬುವುದು. ಮೂರನೇ ಶಕ್ತಿಯನ್ನು ದೂರ ಮಾಡುವ ವರೆಗೆ ನಾವುಗಳು ಪರಸ್ಪರ ಶಾಂತಿಯಿಂದಿರುವದು ಸಾಧ್ಯವಿಲ್ಲ. ಯಾವುದೇ ತಾತ್ಕಾಲಿಕ ಸರಕಾರವು ಎಲ್ಲಾ ಪಕ್ಷಗಳಿಂದ ಕೂಡಿದ್ದಾಗಿರಬೇಕು. ಅಂಥಾ ಸಂದರ್ಭವೊದಗಿದಾಗ ನನ್ನ ಬದಲು ಅಧಿಕಾರ ಹೊಂದಿದ ಬೇರೊಬ್ಬರನ್ನು ನೇಮಿಸಲಾಗುವುದು. ಮತ ತೆಗೆಯುವ ವಿಚಾರದಲ್ಲಿ ಪಾಕಿಸ್ಥಾನದ ಪ್ರದೇಶದಲ್ಲಿ ವಾಸವಿರುವವರ ಅಭಿಪ್ರಾಯದಂತಾಗಬೇಕು ಈ ಮತ ಗಣನೆಯಲ್ಲಿ ಪಾಕಿಸ್ಥಾನಕ್ಕೆ ಬಹುಮತ ದೊರೆತ ದಾದರೆ ತಾತ್ಕಾಲಿಕ ಸರಕಾರವು ಎರಡು ರಾಷ್ಟ್ರಗಳಿಗೂ ಅನ್ವಯಿಸುವಂಥಾ ಅಂಶಗಳಲ್ಲಿ ಕೌಲನ್ನೂ ಒಪ್ಪಂದಗಳನ್ನೂ ತಯಾರಿಸುವದು.'

ಸೆಪ್ಟೆಂಬರ್ 14ರಲ್ಲಿ ಜಿನ್ನಾರವರು ಪತ್ರ ಬರೆದು, 'ಭಾರತ ಸ್ವಾತಂತ್ರ್ಯವೆಂದರೆ 1942ನೇ ಆಗಸ್ಟಿನಲ್ಲಿ ಎ. ಐ. ಸಿ. ಸಿ. ಯಲ್ಲಾದ ನಿರ್ಣಯದಲ್ಲಡಕವಾದ ಅರ್ಥವೇ ಎಂದು ಕೇಳಿದರು. ಸೂತ್ರವನ್ನು ತೃಪ್ತಿಕರವಾಗಿ ಚರ್ಚಿಸುವ ಮುನ್ನ ತಾತ್ಕಾಲಿಕ ಸರಕಾರದ ಬಗ್ಗೆ ಸ್ಪಷ್ಟ ಅಭಿಪ್ರಾಯ ಹೊಂದಬೇಕು. ಅದು ರಚಿತವಾಗುವದು ಹೇಗೆ? ಯಾರಿಗೆ ಜವಾಬ್ದಾರಿ, ಯಾರು ಯಾರು ಅದರಲ್ಲಿರುವರು' ಎಂದು ಪ್ರಶ್ನಿಸಿದ್ದರು.

ಸೆಪ್ಟೆಂಬರ್ 15ರಲ್ಲಿ ಗಾಂಧಿಯವರು ಈ ರೀತಿ ಬರೆದರು, 'ನೀವು ನಮ್ಮ ಚರ್ಚೆಯ ಸಮಯದಲ್ಲಿ ಭಾರತದಲ್ಲಿ ಎರಡು ಜನಾಂಗಗಳಿವೆಯೆಂದೂ, ಅವು ಹಿಂದೂ ಮತ್ತು ಮುಸ್ಲಿಂ ಎಂದೂ ವಾದಿಸಿದ್ದೀರಿ. ಆದರೆ ಅದು ಸತ್ಯವಲ್ಲ. ಮತಾಂತರ ಹೊಂದಿದವರು ಮತ್ತು ಅವರ ಪುತ್ರಪೌತ್ರರು ತಮ್ಮ ಮೂಲ ಬುಡಕಟ್ಟಿನಿಂದ ಪ್ರತ್ಯೇಕ ಜನಾಂಗವೆನ್ನುವುದಾದರೆ ಅದು ನಿಜವಾಗಿಯೂ ಇತಿಹಾಸದಲ್ಲಿಯೇ ಹೊಸ ಸಂಗತಿ. ಇಸ್ಲಾಂ ಧರ್ಮವು ಬರುವ ಮುನ್ನ ಭಾರತವು ಒಂದು ರಾಷ್ಟ್ರವಾಗಿದ್ದಲ್ಲಿ ಅದರ ಹೆಚ್ಚಿನ ಪ್ರಜೆಗಳು ಮತಾಂತರ ಹೊಂದುವದರಿಂದಲೂ ಕೂಡ ಅದು ಒಂದು ರಾಷ್ಟ್ರವಾಗಿಯೇ ಉಳಿಯುವದು. ಬಂಗಾಳಿಗಳು, ತಮಿಳರು, ಆಂಧ್ರರು, ಗುಜರಾತಿಗಳು, ಈಗ ಮುಸಲ್ಮಾನರಾಗಿ ಬಿಟ್ಟರೆ ತಮ್ಮ ವಿಶೇಷ ಭೇಧಗಳನ್ನೆಲ್ಲಾ ಬಿಟ್ಟು ಒಂದಾಗುವುದೇ? ಇವರೆಲ್ಲರೂ ಈಗ ಒಂದಾಗಿರುವುದಾದರೂ ಏಕೆ? ವಿದೇಶಿಯರ ಬಂಧನವನ್ನು ಕಿತ್ತೊಗೆಯಲು ಅವರು ಪ್ರಯತ್ನಿಸುತ್ತಿರುವರು. ರಾಷ್ಟ್ರೀಯತೆಗೆ ನೀವು ಹೊಸದೊಂದು ಆಳತೆ ತಂದಿರುವಿರಿ. ನಾವೆಲ್ಲರೂ ರಾಜಕೀಯವಾಗಿ ಒಂದು ಎಂಬುವುದಕ್ಕೆ ವಿದೇಶಿಯರ ಆಳ್ವಿಕೆಯೇ ಕಾರಣವಾಗಿದೆ. ಲಾಹೋರ್ ನಿರ್ಣಯದಲ್ಲಿ ಪಾಕಿಸ್ಥಾನವಿಲ್ಲ. ಪಾಕಿಸ್ಥಾನದ ಗುರಿಯು ಇಸ್ಲಾಂ ಧರ್ಮವೇ? ಮತ ಧರ್ಮವನ್ನು ಬಿಟ್ಟು ಬೇರೆ ಯಾವುದಲ್ಲಾದರೂ ಹಿಂದೀಯನಿಗೂ, ಮುಸ್ಲಿಮನಿಗೂ ಭೇದವಿದೆಯೇ? ಮುಸ್ಲಿಂ ಲೀಗಿನ ನೀತಿಯಿಂದೆ ದೂರವಾಗಿರುವ ಮುಸ್ಲಿಮರನೇಕರಿದ್ದಾರೆ. ಅವರ ವಿಶಯವೇನು?'

ಗಾಂಧೀಜಿಯವರು ಸೆಪ್ಟೆಂಬರ್ 15ರಲ್ಲಿ ಪುನಹ ಪತ್ರ ಬರೆದು 'ಮುತಗಣನೆ ಪ್ರಕಾರ ದೇಶವು ವಿಭಾಗಿಸಲು ಒಪ್ಪಿದರೆ ವಿಭಾಗವಾಗುವುದು. ಇದೇ ರಾಜಾಜಿ ಸೂತ್ರದಲ್ಲಿದೆ. ತಾತ್ಕಾಲಿಕ ಸರಕಾರದ ಬಗ್ಗೆ ಚರ್ಚೆ ಮುಂದೆ ಆಗಬೇಕು. ಈ ಸರಕಾರವು ಅಸೆಂಬ್ಲಿಗೆ ಜವಾಬ್ದಾರವಾಗಿರುವದು. ಲೀಗಿಗೂ, ಕಾಂಗ್ರೆಸಿಗೂ ಆಗುವ ಯಾವುದೇ ಒಪ್ಪಂದವನ್ನು ನಡೆಸಲು ಈ ಸರಕಾರಕ್ಕೆ ಅಧಿಕಾರವಿರುವದು' ಎಂದು ಸೂಚಿಸಿದರು.

ಸೆಪ್ಟೆಂಬರ್ 17ರಲ್ಲಿ ಜಿನ್ನಾರವರು ಪತ್ರ ಬರೆದು, 'ಮುಸ್ಲಿಮರು ಹಿಂದುಗಳು ಭಾರತದ ಎರಡು ದೊಡ್ಡ ಜನಾಂಗಳು. ಜನಾಂಗ ಎಂಬ ಶಬ್ದದ ಅರ್ಥದಂತೆಯೇ ಇವೆರಡು ಬೇರೆ ಬೇರೆ ಜನಾಂಗಗಳೆಂದು ನಾನು ಹೇಳುತ್ತೇನೆ' ಎಂದು ಸೂಚಿಸಿದರು.

ಸೆಪ್ಟೆಂಬರ್ 19ರಲ್ಲಿ ಗಾಂಧೀಜಿಯವರು ಪತ್ರ ಬರೆದು ಈ ರೀತಿ ಉತ್ತರವಿತ್ತರು. 'ಹಿಂದೂಗಳೂ, ಮುಸಲ್ಮಾನರೂ ಎರಡು ಬೇರೆ ಜನಾಂಗಗಳೆಂಬ ವಿಚಾರವನ್ನು ನಾವಿಬ್ಬರೂ ಈಗ ಬಿಟ್ಟು ಆತ್ಮ ನಿರ್ಣಯದ ತತ್ವದ ಆಧಾರದ ಮೇಲೆ ಸಮಸ್ಯೆಯನ್ನು ಪರಿಹರಿಸಲಾರೆವೇ? ಲಾಹೋರ್ ನಿರ್ಣಯದ ಪ್ರಕಾರ ಮುಸ್ಲಿಮರೇ ಅಧಿಕ ಸಂಖ್ಯೆಯಲ್ಲಿರುವ ಪ್ರದೇಶಗಳನ್ನು ಬೇರೆಯೊಗಿ ಮಾಡುವುದಾದರೆ ಪ್ರತ್ಯೇಕವಾಗುವುದರಿಂದ ಉಂಟಾಗುವ ತೀವ್ರ ಪರಿಣಾಮವನ್ನು ಆ ಪ್ರದೇಶದ ಜನಗಳ ಮುಂದಿಟ್ಟು ಸಮ್ಮತಿ ಪಡೆಯುವುದು ಅಗತ್ಯವಾದ ವಿಚಾರ.'

ಸೆಪ್ಟೆಂಬರ್ ತಾ. 21ರಲ್ಲಿ ಜಿನ್ನಾರವರು ಪತ್ರ ಬರೆದು ಕಾಂಗ್ರೆಸಿನ ಆಗಸ್ಟ್ ನಿರ್ಣಯವು ಮುಸ್ಲಿಂ ಇಂಡಿಯಾದ ಹಿತಕ್ಕೆ ವಿರುದ್ಧವಿದೆ. ಆತ್ಮ ನಿರ್ಣಯದ ಹಕ್ಕು ಎಂಬುವುದರಲ್ಲಿ ನಿಮಗೆ ತಪ್ಪಭಿಪ್ರಾಯವಿರುವಂತೆ ಕಾಣುತ್ತದೆ. ಮುಸ್ಲಿಮರು ಪ್ರತ್ಯೇಕ ಜನಾಂಗವಾಗಿರುವುದರಿಂದಲೇ ಅವರಿಗೆ ಆತ್ಮ ನಿರ್ಣಯದ ಹಕ್ಕು. ಮುಸ್ಲಿಂ ಜನಾಂಗವಾಗಿ ನಾವು ನಮ್ಮ ಹಕ್ಕನ್ನು ಪ್ರಯೋಗಿಸುತ್ತೇವೆ' ಎಂದು ಹೇಳಿದರು.

ಸೆಪ್ಟೆಂಬರ್ 22ರಲ್ಲಿ ಮಹಾತ್ಮರು ಅದಕ್ಕೆ ಜವಾಬು ಬರೆದು, ಮುಸ್ಲಿಮರು ಬೇರೆ ಜನಾಂಗವೆಂಬುವುದನ್ನು ನಾನು ಒಪ್ಪುವುದಿಲ್ಲ. ಹಾಗೆ ಬೇರೆಯೆಂದು ಹೇಳುವದು ಅಪಾಯಕರ. ಜನರ ಮತ ತೆಗೆಯುವುದಕ್ಕೆ ನೀವು ವಿರುದ್ಧವಿದ್ದೀರಿ. ಸಾರ್ವತ್ರಿಕವಾದ ಸಾಮಾನ್ಯವಾದ ರಕ್ಷಣಾ ವಿಚಾರ, ವಿದೇಶಾಂಗ ಕಾರ್ಯನೀತಿ ಮೊದಲಾದ ಅಂಶಗಳ ವಿಚಾರ ಪರಸ್ಪರ ಸಮ್ಮತಿಯಿಂದ ನಿರ್ದಿಷ್ಟವಾದ ಒಪ್ಪಂದ ಏರ್ಪಡುವವರೆಗೆ ಭಾರತದ ವಿಭಜನೆಗೆ ನಾನು ಒಪ್ಪಲಾರೆನು. ಈ ರೀತಿ ನಮಗೆ ಭಿನ್ನಾ

3ನೇ ಪುಟ ನೋಡಿ)

ಕೊ ಡ ಗು

ತಾ. ೬-೧೦-೧೯೪೪ನೇ ಶುಕ್ರವಾರ

ಗಾಂಧಿ ಜಿನ್ನಾ ಭೇಟಿ.

ಇಡೀ ಜಗತ್ತೇ ಎದುರುನೋಡುತ್ತಿದ್ದ ಗಾಂಧಿ ಜಿನ್ನಾ ಭೇಟಿಯು ಮುಕ್ತಿದುಬಿತ್ತು. ಕಾರ್ಗತ್ತಲು ಕವಿದಿರುವ ಹಿಂದೂಸ್ಥಾನದ ಸಭೋಮಂಡಲದಲ್ಲಿ ಆಶಾಕಿರಣವಾಗಿದ್ದ ಈ ಸಂಧಾನವು ಕಳಚಿಬಿದ್ದು ಯಥಾ ಪ್ರಕಾರ ಘೋರಾಂಧಕಾರವು ಕವಿಯಿತು. ಭಾರತೀಯರು ಕಟ್ಟಿದ್ದ ಆಶಾಗೋಪುರಗಳು ನಾಶವಾದವು. ಸಾರ್ವತ್ರಿಕ ಹಬ್ಬಿದ್ದ ಆತಂಕ ಭರವಸೆಗಳು ಮಣ್ಣುಗೂಡಿದವು. ಸಂಧಾನವು ಫಲಕಾರಿಯಾಗದಿರಲು ಪ್ರಾಮುಖ್ಯವಾದ ಕಾರಣವೆಂದರೆ ಜಿನ್ನಾರವರ ಪಾಕಿಸ್ತಾನದ ಕಲ್ಪನೆ. ಸ್ವಯಂನಿರ್ಣಯ ತತ್ವಕ್ಕೆ ಗಾಂಧೀಜಿಯವರು ಒಪ್ಪಿದರೂ ಮುಸ್ಲಿಂ ಜನಾಂಗವು ಪ್ರತ್ಯೇಕ ಸ್ವತಂತ್ರ ರಾಷ್ಟ್ರವಾಗಬೇಕೆನ್ನುವ ಜಿನ್ನಾರವರ ತತ್ವವನ್ನು ಗಾಂಧೀಜಿಯವರು ಒಪ್ಪಲಿಲ್ಲ. ಯಾಕೆ? ಯಾವನೊಬ್ಬ ಭಾರತೀಯನೂ ಇದನ್ನು ಒಪ್ಪಲಾರನು. ಮುಸ್ಲಿಮರು ಅಂತರಿಕ ಅಡಳಿತದಲ್ಲಿ ಬೇರಿದ್ದುಕೊಂಡು, ತಮ್ಮ ಸಂಸ್ಕೃತಿ, ಧರ್ಮಗಳಿಗನುಸಾರ ಪ್ರಗತಿಪಥದಲ್ಲಿ ನಡೆಯುವದರಲ್ಲಿ ಯಾರ ಅಡ್ಡಿಯೂ ಇಲ್ಲ. ಆದರೆ ವಿದೇಶಿಸಂಬಂಧ, ದೇಶದ ರಕ್ಷಣೆ ಇವುಗಳಲ್ಲಿ ಹಿಂದೂದೇಶವು ಅಖಂಡವಾಗಿರಬೇಕು. ಜಿನ್ನಾರವರು ಈ ಅಭಿಪ್ರಾಯವನ್ನು ಒಪ್ಪಲಿಲ್ಲ. ಮುಸ್ಲಿಮರು ಮತ್ತು ಹಿಂದುಗಳು ಪ್ರತ್ಯೇಕ ಜನಾಂಗಗಳು, ಆದ್ದರಿಂದ ಬೇರೆ ಬೇರೆ ಸ್ವತಂತ್ರ ರಾಷ್ಟ್ರಗಳಾಗಬೇಕೆಂದರು. ಪಾಕಿಸ್ತಾನವನ್ನು ರೂಪಿಸುವ ಕಾಲಕ್ಕೆ ಅದಕ್ಕೆ ಸಂಬಂಧಪಡುವ ಜನರ ಮತದಂತೆ ಆಗಬೇಕೆನ್ನುವ ನೀತಿಗೂ ಸಹ ಜಿನ್ನಾರವರು ವಿರುದ್ಧವಿದ್ದಾರೆ. ಗಾಂಧಿ ಜಿನ್ನಾರವರ ಪತ್ರವ್ಯವಹಾರವನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಇವರಿಬ್ಬರಲ್ಲಿಗಾಂಧೀಜಿಯವರಂದಂತೆ 'ಸಾಗರದಂತಾ ಬೇಧವಿರುವದು' ಕಂಡುಬರುತ್ತದೆ.

ಯಾವುದೇ ಒಂದು ಒಪ್ಪಂದವಾಗಬೇಕಾದರೆ ಎರಡು ಕಡೆಯವರೂ ತಮ್ಮ ಅಲ್ಪ ಸ್ವಲ್ಪ ಹಿತವನ್ನು ಬಲಿಕೊಡಬೇಕು, ಮಹಾತ್ಮರು ಮುಸ್ಲಿಮರ ಸ್ವಯಂನಿರ್ಣಯ ತತ್ವವನ್ನು ಒಪ್ಪಿ, ಎರಡು ಹೆಜ್ಜೆ ಮುಂದೆ ಬಂದಿದ್ದರು ಜಿನ್ನಾರವರು ತಮ್ಮ ಪಾಕಿಸ್ತಾನ ಶ್ಲೋಕವನ್ನೇ ಹೇಳುತ್ತಾ ನಿಂತಲ್ಲೇ ನಿಂತಿದ್ದರೆ ಒಪ್ಪಂದವಾಗುವದು ಹೇಗೆ? ಗಾಂಧೀಜಿಯವರಂದಂತೆ ಇದರಿಂದ ನಿರಾಶರಾಗುವ ಕಾರಣವಿಲ್ಲ. ದೇಶೀಯರು ಹಿಂದೂ ಮುಸ್ಲಿಮರಲ್ಲಿ ಐಕ್ಯ ಬೆಳೆಸುವ ಕಂಕಣಬದ್ಧರಾಗಿ ಇನ್ನಷ್ಟು ಹುರುಪಿನಿಂದ ಕೆಲಸ ಮಾಡಬೇಕಿದೆ. ಪುನಹ ಸಂಧಾನದ ಪ್ರಯತ್ನವಾಗಿ ಆದು ಜಯಪ್ರದವಾಗುವ ಸನ್ನಿವೇಶವನ್ನು ಕಲ್ಪಿಸಬೇಕಿದೆ. ಯಾಕೆಂದರೆ ಈ ಐಕ್ಯತೆಯಲ್ಲಿಯೇ ಹಿಂದೂದೇಶದ, ಹಿಂದೀಯರ ಉಜ್ವಲ ಭವಿಷ್ಯವಿರುವದಾಗಿದೆ.

ಒಳದೇಶ.

ಕೊಡಗಿನ ಚೀಫ್ ಫಾರೆಸ್ಟ್ ಆಫೀಸರು ಕಾಯಿಲೆಯಲ್ಲಿರುವದರಿಂದ ಡಿವಿಜನಲ್ ಆಫೀಸರ್ ರಾ. ಸಾ. ಸಿ. ಬಿ. ಚಂಗಪ್ಪನವರು ತಮ್ಮ ಕೆಲಸದೊಂದಿಗೆ ಚೀಫ್ ಫಾರೆಸ್ಟ್ ಆಫೀಸರ ಚಾರ್ಜಿನಲ್ಲಿರುವರು.

ಕೊಡಗು ಕೌನ್ಸಿಲಿನ ಮಿಟಿಂಗು 9-10-44 ರಲ್ಲು ಮಡಿಕೇರಿಯಲ್ಲಿ ನಡೆಯುವದು.

ಹಿಂದೂ ಲಾಕಮಿಟಿಯವರು ಸಾರ್ವಜನಿಕರ ಅಭಿಪ್ರಾಯವನ್ನು ತಿಳಿಯಲು ಸಮಯವನ್ನು 30-11-44 ರ ವರೆಗೆ ಮುಂದುವರಿಸಿರುವದಾಗಿ ತಿಳಿಯುತ್ತೇವೆ.

ಆದಿ ಶ್ರೀಕಾವೇರಿ ಬಸ್ಸ್ ಕಂಪೆನಿಯ ಜನರಲ್ ಮಿಟಿಂಗು 26-10-44 ರಲ್ಲು ಮಡಿಕೇರಿಯಲ್ಲು ನಡೆಯುವದು.

ಕೊಡಗಿನ ಗೆಜೆಟೆಡ್ ಆಫೀಸರುಗಳಿಗೆ ತಿಂಗಳಿಗೆ 500 ರೂಪಾಯಿ ಮೇಲ್ಪಟ್ಟು 1000 ರೂಪಾಯಿಗೆ ಒಳಪಟ್ಟು ಶೇಕಡ 10 ರಂತೆಯೂ, 500 ರೂ. ಗೆ ಕಡಿಮೆ ಸಂಬಳ ಇರುವವರಿಗೆ 50 ರೂಪಾಯಿಯಂತೆಯೂ, ತುಟ್ಟಿ ಭತ್ಯ ಕಳೆದ ಜುಲೈ ತಿಂಗಳಿಂದ ಮಂಜೂರಾಗಿದೆ.

ಜನರಲ್ ಪರ್ಪಸಸ್ ಕಮಿಟಿಗೆ ಮೆ. ಗಳಾದ ಏವರ್ ಬುಲ್ಲ್, ಸಿ. ಯಂ. ಭೀಮಯ್ಯ, ಪಿ ಜಿ. ಐಯ್ಯಪ್ಪ ಮತ್ತು ಯನ್. ಸೋಮಣ್ಣನವರುಗಳನ್ನು 18-7-44 ರಿಂದ ಒಂದು ವರ್ಷದ ವರೆಗೆ ನೇಮಿಸಲಾಗಿದೆ.

ಕೊಡಗು ಮಹಿಳಾ ಸಹಕಾರ ಸಮಾಜದ ವಾರ್ಷಿಕ ಮಹಾಸಭೆಯು ತಾ. 1-10-44 ನೇ ಭಾನುವಾರ ದಿವಸ ಅಪರಾಹ್ನ 3 ಗಂಟೆಗೆ ಸಮಾಜದ ಕಟ್ಟಡದಲ್ಲಿ ಪ್ರೆಸಿಡೆಂಟರಾದ ಶ್ರೀಮತಿ ಕಲಿಯಂಡ ಬೋಜಮ್ಮನವರ ಅಧ್ಯಕ್ಷತೆಯಲ್ಲಿ ನಡೆದು ಶ್ರೀಮತಿಯವರಾದ ಪಾಂಡಂಡ ಬೋಜಮ್ಮನವರನ್ನು ಪ್ರೆಸಿಡೆಂಟರನ್ನಾಗಿಯೂ, ಅಗತಾ ಡಿ. ಮೆಲೊರವರನ್ನು ವೈಸ್ ಪ್ರೆಸಿಡೆಂಟರನ್ನಾಗಿಯೂ, ಚೆಂಬಾಂಡ ತಂಗಮ್ಮನವರನ್ನು ಕಾರ್ಯದರ್ಶಿಯನ್ನಾಗಿಯೂ, ಚೇಂದಿರ ಪೊನ್ನಮ್ಮನವರನ್ನು ಖಜಾನ್ಜಿಯವರನ್ನಾಗಿಯೂ ಮತ್ತು ಕಂಡ್ರತಂಡ ಪೊನ್ನಮ್ಮ, ಮೊಳ್ಳೆರ ಗಂಗಮ್ಮ, ಕೋದಾಂಡ ದೇಚಮ್ಮ, ಚೇಂದಂಡ ಪೂವಮ್ಮ, ಕೆ. ಅಮ್ಮಣ್ಣಿ ಅಮ್ಮ ಇವರುಗಳನ್ನು ಕಾರ್ಯಕಾರಿ ಮಂಡಳಿಯ ಸದಸ್ಯರನ್ನಾಗಿಯೂ ಆಯ್ಕೆಯಾಗಿರುವರಾಗಿ ತಿಳಿಯಬರುತ್ತದೆ.

ಗಾಂಧಿ'ಜಯಂತಿಯ ಬಗ್ಗೆ ಮಂಕೇರಿ ಹೈಸ್ಕೂಲು ವಿದ್ಯಾರ್ಥಿಗಳು ಪ್ರಾರ್ಥನೆ ನಡೆಸಿ ಶಾಂತ ರೀತಿಯಿಂದ ಜಯಘೋಷಗಳನ್ನು ಮಾಡುತ್ತಾ ಗಾಂಧಿಯವರ ಭಾವಚಿತ್ರದ ಮೆರವಣಿಗೆ ಮಾಡಿದರು. ನಂತರ ಜವಿನ್ದಾರರ ಸಂಘದ ಎದುರುಗಡೆ ಸಭೆ ಸೇರಿ ಗಾಂಧಿಯವರು ಧೀರ್ಘಾಯುಗಳಾಗಲೆಂದು ಆಶಿಸಿದರು.

ವೀರಾಜಪೇಟೆ ಹೈಸ್ಕೂಲಿನ ವಿದ್ಯಾರ್ಥಿಗಳೂ ಗಾಂಧಿ ಜಯಂತಿಯ ಬಗ್ಗೆ ರಾಷ್ಟ್ರಗೀತೆಯೊಡನೆ ಮೆರವಣಿಗೆ ತೆಗೆದು ಮಹಾತ್ಮರ ಆಯುರಾರೋಗ್ಯಕ್ಕೆ ಪ್ರಾರ್ಥಿಸಿದರು.

ಕೊಡಗು ವಿದ್ಯಾ ನಿಧಿಯಿಂದ 1944-45ನೇ ಸಾಲಿಗೆ ಹೊರಗೆ ವ್ಯಾಸಂಗ ಮಾಡುವ 42 ವಿದ್ಯಾರ್ಥಿಗಳಿಗೆ ಒಟ್ಟು ರೂ. 3430 ಸಾಲ ಮಂಜೂರು ಮಾಡಲಾಗಿದೆ.

ತುಲಾ ಕಾವೇರಿ ಸಂಕ್ರಮಣದ ಕಾಲದಲ್ಲಿ ಭಾಗಮಂಡಲ ಮತ್ತು ತಲೆಕಾವೇರಿಗೆ ಫ್ಲೇಗು ಮತ್ತು ವಾಂತಿಬೇಧಿ ಇರುವ ಪ್ರದೇಶಗಳಿಂದ ಜನರು ಹೋಗಕೂಡದೆಂದು ನಿರ್ಬಂಧಿಸಲಾಗಿದೆ.

ಕೊಡಗಿನಲ್ಲಿ ಆಗಸ್ಟ್ ತಿಂಗಳಲ್ಲಿ 280 ಜನನಗಳೂ, 305 ಮರಣಗಳೂ ಸಂಭವಿಸಿವೆ.

ಶ್ರೀ ಕೊಂಗೆಟ್ಟಿರ ಅಪ್ಪಯ್ಯನವರನ್ನು 1947ನೇ ಅಕ್ಟೋಬರ್ 23ರವರೆಗೆ ಕೊಡಗು ಟೆಂಪಲ್ ಫಂಡಿನ ಸದಸ್ಯರಾಗಿ ಚುನಾಯಿಸಲಾಗಿದೆ.

ಗಾಂಧಿ ಜಯಂತಿ.

ತಾ. 2-10-44ರಲ್ಲಿ ವೀರಾಜಪೇಟೆಯ ಹಿಂದೀ ಪ್ರಚಾರ ಮಂಡಳಿಯ ಆಶ್ರಯದಲ್ಲಿ ಗಾಂಧಿ ಜಯಂತಿಯನ್ನು ಆಚರಿಸಲಾಯಿತು. ಶ್ರೀ ಪಿ. ಐ. ಬೆಳ್ಯಪ್ಪನವರು ಅಧ್ಯಕ್ಷರಾಗಿದ್ದರು. ನೂಲುವ ಮತ್ತು ಹಿಂದಿ ಸ್ಪರ್ಧೆ ಏರ್ಪಡಿಸಲಾಗಿತ್ತು. ನೂಲಿನ ಪ್ರದರ್ಶನದಲ್ಲಿ ಶ್ರೀ ಕೆ. ಪಿ ರಾಮಚಂದ್ರ, ಮಿಸ್ ಬಿ. ಸಿ. ಮುತ್ತಮ್ಮ, ಮಿಸ್ ಪಿ. ಕಿಟ್ಟು ಸೋಮಪ್ಪನವರಿಗೆ ಅನುಕ್ರಮವಾಗಿ ಪ್ರಥಮ, ದ್ವಿತೀಯ ಮತ್ತು ತೃತೀಯ ಬಹುಮಾನಗಳು ದೊರೆತವು. ಚರಖಾದಲ್ಲಿ ನೂಲುವ ಸ್ಪರ್ಧೆಯಲ್ಲಿ ವೇಗಕ್ಕೆ ಶ್ರೀ ಬಿ. ಪಿ. ಮೂದಪ್ಪ (1) ಮತ್ತು ಶ್ರೀ ಬಿ. ಪಿ. ಗಣಪತಿ (2), ಯವರಿಗೂ, ಉತ್ತಮ ನೂಲಿಗೆ ಮಿಸ್ ಬಿ.ಸಿ. ಮುತ್ತಮ್ಮ (1) ಮತ್ತು ಸಿ. ಸಿ. ಗಂಗಮ್ಮ (2) ನವರಿಗೂ, ಬಹುಮಾನಗಳು ದೊರೆತವು. ವೇಗ ಮತ್ತು ಉತ್ತಮ ನೂಲಿಗಾಗಿ ಶ್ರೀ ಬಿ. ಪಿ. ಮೂದಪ್ಪ(1) ಶ್ರೀ ಬಿ. ಪಿ. ಗಣಪತಿ (2), ಉತ್ತಮ ನೂಲಿಗೆ ಮಿಸ್ ಎಸ್. ಆರ್. ಸುಶೀಲ (1) ಮತ್ತು ಮಿಸ್ ಕೆ. ಜಿ. ಕಮಲ ಇವರಿಗೆ ಬಹುಮಾನ ದೊರೆಯಿತು. ಹಿಂದೀ ಉಕ್ತ ಲೇಖನ (ಕಾಗದದಲ್ಲಿ) ದಲ್ಲಿ ಒಂದನೇ ಬಹುಮಾನ ಮಿಸ್ ಎಂ. ಪಿ. ವಿಮಲನವರಿಗೂ, ದ್ವಿತೀಯ ಬಹುಮಾನ ವಿ. ಎಸ್. ಪುಟ್ಟಯ್ಯನವರಿಗೂ ದೊರೆಯಿತು. ಸ್ಲೇಟಿನ ಮೇಲೆ ಉಕ್ತಲೇಖನದಲ್ಲಿ ಶ್ರೀ ಕೆ. ಎಸ್. ಶಿವರಾಮನವರಿಗೆ ಪ್ರಥಮ ಬಹುಮಾನವೂ ಶ್ರೀ ಗಳಾದ ರತಿ ಮತ್ತು ದೇವೇಶರಿಗೆ ದ್ವಿತೀಯ ಬಹುಮಾನವೂ ದೊರೆಯಿತು. ಶ್ರೀ ಗೋಪಾಲನವರಿಗೆ ವಿಶೇಷ ಬಹುಮಾನ ಕೊಡಲ್ಪಟ್ಟಿತು.

ಬಹುಮಾನ ವಿನಿಯೋಗದ ನಂತರ ಶ್ರೀ ಕೆ. ಪದ್ಮನಾಭರಾಯರು ಗಾಂಧಿಯವರ ಧಾರ್ಮಿಕ ಜೀವನದ ಮೇಲೆ ಭಾಷಣ ಮಾಡಿದರು. ನಂತರ ಸಂಗೀತ ನಡೆಯಿತು ಅಧ್ಯಕ್ಷರು ಮಹಾತ್ಮರ ಖ್ಯಾತಿಯನ್ನು ಪರ್ಣಿಸಿ ಭಾಷಣ ಮಾಡಿದನಂತರ ವಂದನೆಯಿಂದ ಸಭೆಯು ಮುಕ್ತಾಯಗೊಂಡಿತು.

ಮಡಿಕೇರಿಯಲ್ಲಿ ಗಾಂಧಿ ಜಯಂತಿಯು ಕೊಡಗು ಜವಿನ್ದಾರರ ಸಂಘದ ಹಾಲ್‌ನಲ್ಲಿ ಡಾ. ಬಿ. ಕೆ. ನಂಜುಂಡೇಶ್ವರನವರ ಅಧ್ಯಕ್ಷತೆಯಲ್ಲಿ ಜರಗಿತು. ಬೆಳಿಗ್ಗೆ 7½ ಗಂಟೆಯಿಂದ 8½ಯ ವರೆಗೆ ಪ್ರಾರ್ಥನೆ ನಡೆಯಿತು. 9ರಿಂದ 10½ಯ ವರೆಗೆ ನೂಲುವ ಸ್ಪರ್ಧೆ ನಡೆಯಿತು. ತಕಲಿಯಲ್ಲಿ ನೂಲು ತೆಗೆದುದಕ್ಕೆ ಶ್ರೀ ಕೆ. ಎಸ್. ದೇವ್ಕುರಾವ್‌ರವರಿಗೂ, ಧನುಶ್ ತಕಲಿಯಲ್ಲಿ ನೂಲು ತೆಗೆದುದಕ್ಕೆ ಶ್ರೀ ಪಿ. ಹೆಚ್. ಕೃಷ್ಣರವರಿಗೂ, ಚರಖಾದಲ್ಲಿ ನೂಲು ತೆಗೆದುದಕ್ಕೆ ಶ್ರೀ ಎಂ. ಎಂ. ಶಾಂತು ಮತ್ತು ಸರಳರಿಗೆ ಬಹುಮಾನಗಳು ಕೊಡಲ್ಪಟ್ಟವು. ಸಂಜೆ 6 ಗಂಟೆಗೆ ಸಭೆ ಸೇರಿದಾಗ ಶ್ರೀಮತಿ ಸೀತಾ ಬೆಳ್ಯಪ್ಪನವರು ಈ ಬಹುಮಾನ ವಿತರಣೆ ಮಾಡಿದರು. ನಂತರ ಶ್ರೀ ಬಿ. ಡಿ. ಗಣಪತಿಯವರು ಗಾಂಧಿಜೀವರ ಉದಾತ್ತ ಜೀವನವನ್ನು ವಿವರಿಸಿ ಪ್ರಶಂಸಾಡಿದರು. ಅಧ್ಯಕ್ಷರು ಗಾಂಧೀಜಿಯವರ ಮಹಿಮೆಯನ್ನು ಕೊಂಡಾಡಿದನಂತರ ಕುಮಾರಿ ಪಿ. ಲೀಲಾ, ಕಮಲಾರವರ ಸುಶ್ರಾವ್ಯ ರಾಷ್ಟ್ರಗೀತೆಯೊಡನೆ ಕಾರ್ಯಕಲಾಪವು ಮುಕ್ತಾಯವಾಯಿತು.

ತಿದ್ದುಪಡಿ.

ಕಳೆದ ವಾರ ಪ್ರಕಟವಾದ ಕಸ್ತೂರ್ ಬಾ. ನಿಧಿಗೆ ಧನ ಸಹಾಯಮಾಡಿದವರ ಪಟ್ಟಿಯಲ್ಲಿ ಶ್ರೀಮತಿ ಬಡುವ ಮಂಡ ಕುಶಾಲಪ್ಪ ದೇಚಮ್ಮ ಎಂಬ ಹೆಸರು 'ಬಡುವಂಡ' ಎಂದೂ, ಅಣ್ಣಪ್ಪ ಭಾಗಮಂಡಲ ರೂ. ೫ ಬಿ. ಪಿ. ಅಣ್ಣಪ್ಪ ರೂ. 10 ಎಂಬುದು ಬಿ. ಪಿ. ಅಣ್ಣಪ್ಪ ರೂ. 15 ಎಂದೂ ತಪ್ಪಾಗಿ ಪ್ರಿಂಟಾಗಿದೆ. ಆದನ್ನು ಸರಿಪಡಿಸಿ ಓದಿಕೊಳ್ಳಬೇಕಾಗಿ ವಿನಂತಿ. ಸಂ.

ರಣಭೇರಿ.

ಚರ್ಚಿಲ್ಲರ ಭಾಷಣ.

ಯುದ್ಧ ಪರಿಸ್ಥಿತಿಯ ವಿಮರ್ಶೆ ಮಾಡುತ್ತಾ ಚರ್ಚಿಲ್ಲರು ಪಾರ್ಲಿಮೆಂಟಿನಲ್ಲಿ ಹೀಗೆ ಹೇಳಿದರು. 'ಯೂರೋಪಿನ ಸಂಗ್ರಾಮದ ಸ್ಥಿತಿ ಬದಲಾಯಿಸಿದೆ. ಮಿತ್ರರ 20ರಿಂದ 30 ಲಕ್ಷದ ಪರಿಗೆ ಯೋಧರು ಯೂರೋಪಿನ ರಣರಂಗದಲ್ಲಿ ಹೋರಾಡುತ್ತಿದ್ದಾರೆ. ಈ ರಂಗಗಳಲ್ಲಿ ನಮಗೆ ಸಹಾಯಕರಾಗಿ ಮಹೋಪಕಾರ ಮಾಡುತ್ತಿರುವ ಅಮೇರಿಕನರನ್ನು ಎಷ್ಟು ಹೊಗಳಿದರೂ ಸಾಲದು. ಶಾಂತಿಸಾಗರದಲ್ಲಿ ಜಪಾನಿನೊಡನೆಯೂ ಅದು ಯುದ್ಧ ಮಾಡುತ್ತಿದೆ. ಸೋದರೀ ಜನಾಂಗವಾದ ಅಮೇರಿಕಕ್ಕೆ ಬ್ರಿಟನು ಋಣಿಯಾಗಿಯೇ ಬೇಕು. ಪರಿಸ್ಥಿತಿ ಚಿಂತಾಜನಕವಿದ್ದರೂ ಭಾರತೀಯರು ಗಂಭೀರ ಧೈರ್ಯದಿಂದ ಜಗತ್ತಿನ ಸಂಗ್ರಾಮ ಜಂಝಾವಾತವನ್ನು ಎದುರಿಸುತ್ತಿದ್ದಾರೆ. ಸಾಮ್ರಾಜ್ಯ ಗುರಾಣಿಯ ಹಿಂದಿದ್ದುಕೊಂಡು ನಿಮ್ಮದಿಯಿಂದಿದ್ದಾರೆ. ಅಮೇರಿಕ, ಬ್ರಿಟನ್, ರಷ್ಯಾಗಳು ಒಂದಾಗಿ ಒಬ್ಬ ಮಹಾಶತ್ರುವಿನಂತೆ ಜರ್ಮನಿಯ ಮೇಲೆ ಬಿದ್ದವು. ಇದರಿಂದ ಫ್ರಾನ್ಸಿನ ಬಿಡುಗಡೆಯಾಯಿತು ಜರ್ಮನಿಯ ಬೆನ್ನೆಲುಬು ಮುರಿದಂತಾಯಿತು. ರಷ್ಯಾಕ್ಕೂ ಜರ್ಮನಿಯು ವಿಪರೀತವಾದ ತೊಂದರೆ ಕೊಟ್ಟಿದೆ. ಜರ್ಮನಿಯಿಂದ ಪೋಲೆಂಡು ಉಳಿಯಬೇಕಾದರೆ ರಷ್ಯಾದಿಂದಲೇ ಅದು ಸಾಧ್ಯ. ಕೆರಾಳಿ ಜರ್ಮನಿಯು ನಾಲ್ಕು ವರ್ಷಗಳವರೆಗೆ ಯೂರೋಪಿನಲ್ಲಿ ತಾಂಡವ ನೃತ್ಯವಾಡಿತು. ಪಶ್ಚಿಮರಣರಂಗದಲ್ಲಿ ನಾಲ್ಕಾರು ಲಕ್ಷ ಜನರನ್ನು ಕೊಂದು, ಗಾಯಗೊಳಿಸಿ ಓಡಿತು. ತಮ್ಮ 2 ಲಕ್ಷ ಯೋಧರನ್ನು ನಮ್ಮ ಕೈಯಲ್ಲಿ ಬಂಧಿಗಳಾಗಿ ಇರಿಸಿ ಕಾಲಿಗೆ ಬುದ್ಧಿ ಹೇಳಿತು. ಅನೇಕರು ಹಿಟ್ಲರನನ್ನು ನೆಪೋಲಿಯನನಿಗೆ ಹೋಲಿಸುತ್ತಾರೆ, ನೆಪೋಲಿಯನನು ಮಹಾವೀರ ಆದರೆ ಹಿಟ್ಲರನು ಕೊಲೆಪಾತಕಿ, ದ್ರೋಹಿ. ನೆಪೋಲಿಯನನಿಗೆ ಈತನನ್ನು ಹೋಲಿಸಿದರೆ ನೆಪೋಲಿಯನನನ್ನು ಹೀನನೈದಂತೆ. ಈ ಯುದ್ಧ 1944 ರಲ್ಲಿ ಅಂತ್ಯವಾಗುವದೆಂದು ಅನೇಕ ಸಮರ ತಜ್ಞರು ಹೇಳುತ್ತಾರೆ. 1945 ನೇ ವರ್ಷದ ಅನೇಕ ತಿಂಗಳುಗಳ ವರೆಗೂ ಈ ಯುದ್ಧ ನಡೆಯಲಾರದೆಂದು ನಾನು ಹೇಗೆ ಹೇಳಲಿ? ಇಂದು ಸರ್ವಕ್ಷೇತ್ರದಲ್ಲೂ ನಮಗೆ ಜಯವೇ! ಸೋಲಿನ ಸೊಲ್ಲೇ ಇಲ್ಲ' ಎಂದರು. ಚರ್ಚಿಲ್ಲರ ಭಾಷಣವು ಜಯದ ಸಂತೋಷದಿಂದ ತುಂಬಿದೆ. ಇನ್ನೇನು ಜರ್ಮನಿಯು ಯುದ್ಧ ಮುಗಿದಂತೆ ಎನ್ನುವಂತಿದೆ.

ಜರ್ಮನ್ ನೀತಿ.

"ಶರಣಾಗು' ಎಂಬ ಶಬ್ದವು ಜರ್ಮನ್ ಶಬ್ದಕೋಶದಲ್ಲಿರಕೂಡದು. ಇಂದಿನ ಪರಿಸ್ಥಿತಿ ಹಾಗಿದೆ. ಇನ್ನು ಹಿಂತೆಗೆದುಕೊಳ್ಳುವದು ಸಾಧ್ಯವಿಲ್ಲ. ನಾವು ಈಗ ಜರ್ಮನ್ ನೆಲದಲ್ಲಿ ನಿಂತು ಹೋರಾಡುತ್ತಿರುವೆವು. ನಮ್ಮ ಜನಾಂಗವನ್ನು ಗುಲಾಮರಾಗಿ ಮಾಡಿ ಸದೆಬಡಿಯಲು ಮಿತ್ರರು ಪ್ರಯತ್ನಿಸುತ್ತಿದ್ದಾರೆ." ಇದು ಜರ್ಮನ್ ರೇಡಿಯೋದಿಂದ ಪ್ರಕಟವಾದ ಮಾತು. ಇದರಿಂದ ಜರ್ಮನರ ಮನೋಭಾವ ಹೇಗಿದಯೆಂದು ತಿಳಿಯಬರುವದು. ಜರ್ಮನರು ಎಂದಿಗೂ ಶರಣಾಗತವಾಗುವಂತೆ ಕಂಡುಬರುವದಿಲ್ಲ. ಬದಲು ಕಳೆದ ವಾರದ ಯುದ್ಧಗತಿಯನ್ನು ನೋಡಿದರೆ ಜರ್ಮನರು ಮಿತ್ರರ ಪೆಟ್ಟುಗಳನ್ನು ಇನ್ನೂ ಹಲವು ಸಮಯದ ವರೆಗೆ ತಡೆಯಬಲ್ಲರೆಂಬುದು ವೇದ್ಯವಾಗುತ್ತಿದೆ. ಕಳೆದ ವಾರ ಹಾಲೆಂಡಿನಲ್ಲಿ ಅತ್ಯುಗ್ರವಾದ ಕದನವಾಯಿತು. ಹಿಟ್ಲರನ 'ಸೀಜ್‌ಫ್ರೈಡ್' ಕೋಟೆಯು ಈ ಭಾಗದಲ್ಲಿಯೇ ಸ್ವಲ್ಪ ನಿರ್ಬಲವಾಗಿರುವದಾಗಿದೆ. ಆಲ್ಲದೆ ಈ ಮಾರ್ಗವಾಗಿಯೇ ಬರ್ಲಿನಿಗೆ ಹತ್ತಿರದ ದಾರಿಯಾಗಿದೆ. ಆದ್ದರಿಂದ ಮಿತ್ರರು ಈ ಮಾರ್ಗವಾಗಿ ಜರ್ಮನಿಗೆ ನುಗ್ಗಲು ಪ್ರಯತ್ನಿಸುತ್ತಿದ್ದಾರೆ. ಜರ್ಮನರು ಇಲ್ಲಿ ಬಹು ತೀವ್ರವಾದ ಪ್ರತಿಭಟನೆಯನ್ನು ಮಾಡುತ್ತಿದ್ದಾರೆ. ಹಾಲೆಂಡು ಹೊಳೆಗಳ ರಾಜ್ಯ. ಈ ಹೊಳೆಗಳು ತಮ್ಮನ್ನು ರಕ್ಷಿಸುವವೆಂದು ಜರ್ಮನರು ತಿಳಿದಿದ್ದರು. ಆದರೆ ಮಿತ್ರರು ವಿಮಾನದ ಮೂಲಕ ಸೇನೆಗಳನ್ನು ತಂದಿಳಿಸಿದ ಕಾರಣ ಜರ್ಮನರು ಮುಂದೆಸಾಗಿ ಪ್ರತಿಭಟಿಸಬೇಕಾಯಿತು. ಈ ಪ್ರತಿಭಟನೆಯು ಬಹು ಭಯಂಕರವಾಗಿ ನಡೆಯಿತು. ಜರ್ಮನರು ಜೀವದ ಹಂಗು ತೊರೆದು ಕಾದುತ್ತಿದ್ದಾರೆ. ಮಿತ್ರರ ಸರ್ವದಳಗಳನ್ನೂ ಹಿಮ್ಮೆಟ್ಟಿಸಿ ದಂಗುಬಡಿಸಿದ್ದರು. ಆದರೆ ಪುನಹ ಮಿತ್ರರ ಸೇನೆಗಳು ಮೇಲೇರಿ ಬಂದಿವೆ. ಈ ಭಾಗದ ಯುದ್ಧವಾಗುತ್ತಿದೆ. ಪ್ರದೇಶಗಳು ಈ ಕ್ಷಣ ಮಿತ್ರರ ವಶವಿದ್ದರೆ ಮತ್ತೊಂದು ಕ್ಷಣ ಶತ್ರುಗಳಲ್ಲಿ. ಇನ್ನೊಂದು ಕ್ಷಣ ಮಿತ್ರರಲ್ಲಿ ಹೀಗೆ ಕೈ ಬದಲಾಗುತ್ತಿವೆ. ಯುದ್ಧವನ್ನು ಹೀಗೆ ಎಷ್ಟು ದಿನ ಮುಂದೆ ನೂಕಬಹುದೆಂಬುದು ಅನಿಶ್ಚಿತಮಾತಾಗಿದೆ. ಚರ್ಚಿಲ್ಲರು 1945 ರಲ್ಲೂ ಯುದ್ಧವಾಗಬಹುದೆನ್ನುತ್ತಾರೆ. 'ಈ ವರ್ಷ ಯುದ್ಧವು ಮುಗಿಯುವದೆಂಬ ಆಶೆ ನನಗಿಲ್ಲ. ಬಹುಶಃ ಜರ್ಮನರು 1945 ನೇ ವಸಂತ ಋತುವಿನಲ್ಲಿ ಸೋಲಬಹುದು' ಎಂದು ಜನರಲ್ ವಿಲೆಬಿಟ್‌ರವರು ಹೇಳಿದ್ದಾರೆ. ಇವರು ಮೊದಲು ಜರ್ಮನಿಯಲ್ಲಿದ್ದು ಅದರ ಆಂತರಂಗ ಶಕ್ತಿಯನ್ನು ಬಲ್ಲವರು. ಆದ್ದರಿಂದ ಯುದ್ಧವು ಬರುವ ವರ್ಷವೂ ನಡೆಯಬಹುದು. ಹಿಟ್ಲರನ ಆಶಯವಾದರೂ ಹೀಗೆ ಇರಬಹುದು. ಆಕ್ಟೋಬರಿನಿಂದ ಡಿಸೆಂಬರ್ ವರೆಗಿನ ಮೂರು ತಿಂಗಳು ಹಿಟ್ಲರನಿಗೆ ಯುದ್ಧಕ್ಕೆ ಯೋಗ್ಯ ಸಮಯವಾಗಿದೆ. ಯುದ್ಧವನ್ನು ಇನ್ನೂ ಮುಂದೆ ಸಾಗಿಸಿ ಮಿತ್ರರನ್ನು ಬಹುಮಟ್ಟಿಗೆ ಸ್ಪಷ್ಟ ಕಷ್ಟಕ್ಕೆ ಗುರಿಪೂಡಿಸಿ ಸುಲಭ ಶರತ್ತುಗಳಿಂದ ಒಪ್ಪಂದವಾಗುವಂತೆ ಏರ್ಪಡಿಸುವದು ಆತನ ಆಶೆಯಿದ್ದಂತಿದೆ. 'ಜರ್ಮನಿಯ ಮೇಲೆ ಹಿಟ್ಲರನ ಗೆಸ್ಟಪೊದಳದ ಹಿಡಿತವಿರುವ ವರೆಗೆ ಯುದ್ಧ ಮುಗಿಯದು' ಎಂಬುದಾಗಿ ಜನರಲ್ ಈಶೆನ್‌ಹೋವರರೇ ಹೇಳಿದ್ದಾರೆ. ಗೆಸ್ಟಪೊದಳವು ಜನತೆಯ ಮೇಲಿರುವ ಹಿಡಿತವನ್ನು ಕಳಕೊಂಡಂದು ಹಿಟ್ಲರನ ಆಳಿಕೆಯೂ ಕೊನೆಯೂ ಆಗುವದು. ಆದ್ದರಿಂದ ಆತನು ತನ್ನ ಗೆಸ್ಟಪೊದಳದ ಹಿಡಿತವನ್ನು ಭದ್ರಮಾಡಿ ಯುದ್ಧವನ್ನು ಇನ್ನಷ್ಟು ಮುಂದೆ ಸಾಗಿಸುವ ನಿಷ್ಠೆಯಿಂದಿದ್ದಾನೆ.

ಇತ್ತ ಪೂರ್ವಕಡೆಯಿಂದ ಬರುತ್ತಿರುವ ರಷ್ಯಾವು ಹೆಚ್ಚು ಪ್ರಗತಿ ಪಡೆದಿಲ್ಲ. ಇಟಲಿಯಲ್ಲಿ ಮಿತ್ರರು ಈ ವಾರ ಸ್ವಲ್ಪ ಮೈಕೊಡಹಿ ಮುಂದೆ ನುಗ್ಗುವ ಯತ್ನ ಮಾಡಿದ್ದಾರೆ. ಜಪಾನ್ ಕಾಳಗ ಇನ್ನು ಪ್ರಾರಂಭವಾಗಬೇಕು. ಚೀನಾದ ಪರಿಸ್ಥಿತಿ ಸುಧಾರಿಸಿಲ್ಲ.

(1ನೇ ಪುಟದಿಂದ ಸಾಗಿದ್ದು)

ಭಿಪ್ರಾಯವಿರುವದರಿಂದ ಮೂರನೇಯವರ ಮಧ್ಯಸ್ಥಿತಿಕೆ ಏರ್ಪಡಿಸಬಹುದು.' ಎಂದರು.

ಸೆಪ್ಟೆಂಬರ್ 23ರಲ್ಲಿ ಜಿನ್ನಾರವರು ಉತ್ತರ ಕೊಡುತ್ತಾ 'ಗಾಂಧಿಯವರು ವಯಕ್ತಿಕವಾಗಿ ಯಾವ ಪ್ರತಿನಿಧಿಯೂ ಅಲ್ಲದೆ ಸ್ಪೋತಾಡುತ್ತಿದ್ದು ಮಧ್ಯಸ್ಥಿಕೆ ಏರ್ಪಡಲಿ ಎಂದು ಹೇಗೆ ಹೇಳುವದು. ಗಾಂಧಿಜಿಯವರು ಒಂದು ಸಂಸ್ಥೆಯ ಅಧಿಕೃತ ಪ್ರತಿನಿಧಿಯಾಗಿ ಬರಲಿ. ಲಾಹೋರ್ ನಿರ್ಣಯದ ಆಧಾರದ ಮೇಲೆಯೇ ನಾನು ನಡೆಯುತ್ತಿದ್ದೇನೆ.' ಎಂದರು.

ಗಾಂಧೀಜಿಯವರು ಸೆ. 24ರಲ್ಲಿ ಪತ್ರ ಬರೆದು 'ನನಗೂ ಜಿನ್ನಾರವರಿಗೂ ಭಿನ್ನಾಭಿಪ್ರಾಯಗಳಿವೆ. ನಾನು ಈ ಸೂಚನೆಗಳನ್ನು ಮಾಡುತ್ತೇನೆ. (1) ಪ್ರತ್ಯೇಕವಾಗುವ ಪ್ರದೇಶಗಳು ಯಾವುವು ಎಂದು ನಿರ್ಧರಿಸಲ್ಕು ಕಾಂಗ್ರೆಸ್ ಮತ್ತು ಲೀಗಿನ ಒಪ್ಪಂದದಿಂದ ಸಮಿತಿ ಏರ್ಪಾಡಾಗಬೇಕು. (2) ನಿರ್ದಿಷ್ಟ ಪ್ರದೇಶದಲ್ಲಿ ವಾಸಮಾಡುವ ಜನರ ಅಭಿಪ್ರಾಯವೇನೆಂದು ಪ್ರತ್ಯೇಕವಾಗುವ ವಿಚಾರದಲ್ಲಿ ತಿಳಿಯಬೇಕು. (3) ಪ್ರಾಪ್ತ ವಯಸ್ಸಿನ ಜನರೆಲ್ಲರೂ ಈ ವಿಚಾರ ಮತದೀಯರಾಗಬೇಕು. (4) ಪ್ರತ್ಯೇಕವಾಗಬೇಕೆಂದು ಈ ಪ್ರದೇಶಗಳ ಜನರು ಅಭಿಪ್ರಾಯ ಪಟ್ಟರೆ ಭಾರತವು ಪರಾಧೀನತೆಯಿಂದ ಸ್ವತಂತ್ರವಾದ ನಂತರ ಆ ರೀತಿ ಪ್ರತ್ಯೇಕ ರಾಜ್ಯರಚಿಸಬಹುದು. (5) ಎರಡು ರಾಜ್ಯಗಳಿಗೂ ವಿದೇಶ ವಿಚಾರ, ರಕ್ಷಣೆ ಮೊದಲಾದ ವಿಷಯಗಳಲ್ಲಿ ಪರಸ್ಪರ ಸಮ್ಮತಿಯಿರಬೇಕು. ಅಲ್ಪ ಸಂಖ್ಯಾತ ಕೋಮುಗಳ ಹಕ್ಕು ಬಾಧ್ಯತೆಗಳ ರಕ್ಷಣೆ ವಿಚಾರ ನಿರ್ದಿಷ್ಟ ಶರತ್ತುಗಳಿರಬೇಕು. (6) ಕಾಂಗ್ರೆಸ್ ಲೀಗ್ ಈ ಒಪ್ಪಂದಕ್ಕೆ ಸಮ್ಮತಿಸಿ ಭಾರತ ಸ್ವಾತಂತ್ರ್ಯ ಸಾಧನೆಗಾಗಿ ಏಕರೀತಿಯ ಕಾರ್ಯಕ್ರಮವನ್ನು ಅನುಸರಿಸಬೇಕು. (7) ಕಾಂಗ್ರೆಸ್ ಸಕ್ರೀಯ ಸತ್ಯಾಗ್ರಹ ಮಾಡುವಾಗ ಮುಸ್ಲಿಂಲೀಗ್ ಹಾಗೆ ಮಾಡದೆ ಸುಮ್ಮನಿರಬಹುದು. ಜಿನ್ನಾರವರು ಇದಕ್ಕೆ ಒಪ್ಪದಿದ್ದರೆ ತಮ್ಮ ಲಾಹೋರ್ ನಿರ್ಣಯದ ಶರತ್ತುಗಳನ್ನು ತಿಳಿಸಲಿ.' ಎಂದು ಕೇಳಿದರು.

ಜಿನ್ನಾರವರು ಉತ್ತರ ಬರೆಯುತ್ತಾ 'ಗಾಂಧೀಜಿಯ ಸಲಹೆಗಳಿಗೆ ಒಪ್ಪಲಾರೆನು. ಈ ಸಲಹೆಗಳೆಲ್ಲವೂ ಲಾಹೋರ್ ನಿರ್ಣಯಕ್ಕೆ ವಿರುದ್ಧವಾಗಿವೆ.' ಎಂದರು.

ಗಾಂಧೀಜಿಯವರು ಪುನಹ ತಾ. 25ರಲ್ಲಿ ಪತ್ರ ಬರೆದು 'ಲಾಹೋರ್ ನಿರ್ಣಯದ ಮುಖ್ಯಾಂಶಗಳಂತೆ ನಡೆದುಕೊಳ್ಳಲು ನಾನು ನನ್ನ ಸಲಹೆಗಳನ್ನು ಮಾಡಿದೆನು. ಇದನ್ನು ನಿರಾಕರಿಸುವ ಮೊದಲು ಐವತ್ತು ಸಾರಿ ಆಲೋಚನೆ ಮಾಡಬೇಕು. ಕೋಮು ವಾರು ಐಕ್ಯಮತ್ಯವನ್ನು ಸಾಧಿಸುವ ಮತ್ತು ಭಾರತಕ್ಕೆ ಸೇವಸಲ್ಲಿಸುವ ದೃಷ್ಟಿಯಿಂದಲೇ ನಾನು ಸಂಧಾನ ನಡೆಸುತ್ತಿದ್ದೇನೆ. ನನ್ನ ಸಲಹೆಗಳನ್ನು ತಿರಸ್ಕರಿಸುವದು ಜವಾಬ್ದಾರಿಯುತವಾದ ಕೆಲಸ. ದಯವಿಟ್ಟು ನಿರಾಕರಿಸದಿರಿ. ನಿಮ್ಮ ಮುಸ್ಲಿಂಲೀಗ್ ಕೌನ್ಸಿಲಿನಲ್ಲಿ ಭಾಷಣ ಮಾಡಲು ನನಗೊಂದು ಅವಕಾಶಕೊಡಿ. ನಿಮ್ಮಿಂತೆ ಅವರೂ ನಿರಾಕರಿಸಿದರೆ ಮುಸ್ಲಿಂಲೀಗಿನ ಬಹಿರಂಗ ಅಧಿವೇಶನದಲ್ಲಿ ಇದು ತೀರ್ಮಾನವಾಗಲಿ.' ಎಂದು ಹೇಳಿದರು.

ಜಿನ್ನಾರವರು ಪತ್ರ ಬರೆದು, 'ಲೀಗ್ ಕೌನ್ಸಿಲಿನಲ್ಲಿಯೂ ಲೀಗ್ ಬಹಿರಂಗ ಅಧಿವೇಶನದಲ್ಲಿಯೂ ಭಾಷಣಮಾಡಲು ಮುಸ್ಲಿಂಲೀಗಿನ ಸದಸ್ಯರೊಬ್ಬರಿಗೆ ವಿನಹ ಬೇರೆಯವರಿಗೆ ಹಕ್ಕಿಲ್ಲ' ವೆಂದು ತಿಳಿಸಿದರು.

ಗಾಂಧೀಜಯವರು ಉತ್ತರಿಸುತ್ತಾ 'ಲಾಹೋರ್ ನಿರ್ಣಯವನ್ನು ಒಪ್ಪಲಾರೆನು. ಅದಕ್ಕೆ ನೀವು ಹೊಸ ಅಂಶಗಳನ್ನು ಸೇರಿಸಿದ್ದೀರಿ. ಭಾರತವೂ ಸಹ ಇದನ್ನು ಒಪ್ಪಲಾರದು. ಹೇಗಿಬ್ಬರೂ ಒಂದು ರೀತಿಯ ಒಪ್ಪಿಗೆಗೆ ಬಂದಲ್ಲಿ ನನ್ನ ಪ್ರಭಾವವನ್ನು ಉಪಯೋಗಿಸಿ ಕಾಂಗ್ರೆಸ್ಸು ಅದಕ್ಕೆ ಒಪ್ಪುವಂತೆ ಶಿಫಾರಸ್ಸು ಮಾಡುವೆನು. ನೀವು ಒಪ್ಪಂದವನ್ನು ಮುರಿದರೆ ಅದು ನನಗೆ ಪ್ರಾತಿನಿಧ್ಯ ಜವಾಬ್ದಾರಿ ಇಲ್ಲವೆಂಬ ಯೂ ಲಾಹೋರ್ ನಿರ್ಣಯದ ತಿರುಳನ್ನು ನಾನು ಒಪ್ಪಲಿಲ್ಲವೆಂಬ ಕಾರಣದಿಂದ ಆಗಲಾರದು' ಎಂದು ಹೇಳಿದರು.

ಜಿನ್ನಾರವರು ತಮ್ಮ ಕೊನೆ ಪತ್ರದಲ್ಲಿ 'ಗಾಂಧೀಜಿಯವರು ಲಾಹೋರ್ ನಿರ್ಣಯವನ್ನು ಒಪ್ಪಲಿಲ್ಲ. ಇಂಡಿಯಾದ ಪಾಕಿಸ್ತಾನ ರಚನೆಗೆ ಪುರಸ್ಕಾರ ಕೊಡಲಿಲ್ಲ. ಎಷ್ಟೇ ದೊಡ್ಡವರಾದರೂ ಪ್ರಾತಿನಿಧ್ಯವಿಲ್ಲದ್ದರಿಂದ ಸಂಧಾನವು ಫಲಿಸದು. ಸಂಧಾನ ಮುರಿದರೆ ಅದಕ್ಕೆ ಗಾಂಧೀಜಿಯವರೇ ಕಾರಣ' ಎಂದು ತಿಳಿಸಿದರು.

—೦೦—

ಈ ದಿನಗಳಲ್ಲಿ ಜೀವವಿಮೆಯು ಜಾತಿ, ಮತ್ತು ಉದ್ಯೋಗಗಳ ಬೇಧವಿಲ್ಲದೆ ಎಲ್ಲರಿಗೂ ಅವಶ್ಯವೆಂದು ನಾವೆಲ್ಲರೂ ಒಪ್ಪುತೇವೆ.

ವಿವರಗಳಿಗೆ ಬರೆಯಿರಿ:—

ಕೊಚ್ಚಿಕಾರ್ ಬ್ರದರ್ಸ್, ಲಿ.

ದಕ್ಷಿಣ ಹಿಂದೂಸ್ಥಾನಕ್ಕೆ ಮುಖ್ಯ ಏಜಂಟರು.

ದಿ ಬೋಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.

3) ಪುತ್ತೈರ, ಕಲ್ಲಿಕೋಟೆ.

ದಕ್ಷಿಣ ಹಿಂದೂಸ್ಥಾನದಲ್ಲೆಲ್ಲಾ ಶಾಖೆಗಳೂ, ಏಜೆನ್ಸಿಗಳೂ ಇವೆ.

ಧಾತು ವೃದ್ಧಿ ರಸಾಯನ (ZANDU)

"ರ್ಯಾಕ್ಯೂಟ್—ಫಾಸ್ಫೋ—ಮೊಲ್ಫ್"

ಎಂದು ಪ್ರಸಿದ್ಧ ಡಾಕ್ಟರುಗಳು ಮುಕ್ತ ಕಂಠದಿಂದ ಹೊಗಳುತ್ತಿದ್ದಾರೆ.

ಈ ರಸಾಯನ } ಕಾಯಿಲೆಯವರಿಗೆ, ಆರೋಗ್ಯದಿಂದಿರುವವರಿಗೆ, ಧಾತು ಕ್ಷೀಣತೆಯುಳ್ಳವರಿಗೆ, ರೋಗ ನಿವೃತ್ತಿಯಾಗಿ ಸುಧಾರಿಸಿಕೊಳ್ಳುವವರಿಗೆ, ಅಶಕ್ತರಿಗೆ ಟಾನಿಕ್.

ವಿದ್ಯಾರ್ಥಿಗಳಿಗೆ, ವಕೀಲರಿಗೆ, ವೈದ್ಯರಿಗೆ, ಡಾಕ್ಟರರಿಗೆ, ಶ್ರಮ ಜೀವಿಗಳಿಗೆ, ರೋಗಿಗಳಿಗೆ, ನಿರೋಗಿಗಳಿಗೆ, ಗೃಹಸ್ಥಾಶ್ರಮಿಗಳಿಗೆ, ಬ್ರಹ್ಮಚಾರಿಗಳಿಗೆ, ಸ್ತ್ರೀಯರಿಗೆ, ಪುರುಷರಿಗೆ—ಎಲ್ಲರಿಗೂ ಬೇಕಾದ ರಸಾಯನವಿದು. ಇದು ಜಠರಾಗ್ನಿಯನ್ನು ಸರಿಪಡಿಸುವುದು. ಮೆದುಳಿಗೆ ತಂಪನ್ನುಂಟುಮಾಡುವುದು, ನಾಲಿಗೆಗೆ ರುಚಿಯಾಗಿರುವುದು. ಇದರಲ್ಲಿ ಜವಜೀವಕರವಾದ ಎಲ್ಲಾ ವಿಟಮಿನ್ನುಗಳು ಕೆಂಪು ರಕ್ತ ಕಣಗಳನ್ನು ಹೆಚ್ಚಿಸುವ ಅಮೂಲ್ಯ ಔಷಧಿಗಳವೆ.

ಇದರಲ್ಲಿ ಇಲೆಕ್ಟರ್ ಪಾಸ್ಫೋನೊಲ್ಫ್, ಹೆಮೋಗ್ಲೋಬಿನ್, ಸೋದಿಗ್ಲಿಸರೊ ಫಾಸ್ಫೇಟ್ ಪೆಪ್ಟನ್, ಸಾಲ್, ಮೊಲ್ಟ್ ಎಕ್ಸ್‌ಟ್ರಾಕ್ಟ್, ದಾಕ್ಷಾಸವ ಮೊದಲಾದ ಪ್ರಸಿದ್ಧ ಔಷಧಿಗಳಂಶ ವಿದೆ. ಇಂದಿನಿಂದಲೇ ಸೇವಿಸಿ ಆಮಭವ ಪಡೆಯಿರಿ. ಇದು ಎಲ್ಲಾ ಪ್ರಸಿದ್ಧ ಔಷಧ ಷಾಪುಗಳಲ್ಲಿವೆ.

ಝಂಡು ಫಾರ್ಮಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್,

5) ಗೋಖಲೆ ರೋಡ್, ಬೋಂಬೆ.

ಎಂಪೈರ್ ಆಫ್ ಇಂಡಿಯಾ

ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

42) ಸ್ಥಾಪನೆ:—೧೮೯೭.

೪೭ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು.	ಒಟ್ಟು ಆದಾಯ	೯೭,೩೭,೦೦೦ ರೂಪಿದೆ
	ಚಾಲ್ತಿಯಿರುವ ವಿಮೆ	೧೩,೪೯,೭೮,೦೦೦ ,,
	ಆಸ್ತಿ	೬,೩೦,೪೭,೦೦೦ ,,
	ಕಂಪೆನಿಯು ಆದಿಯಲ್ಲಿ ಕೊಟ್ಟ ಕ್ಲೈಮುಗಳು	೪,೩೮,೦೦,೦೦೦ ,,

ಅಂಗ ಕಛೇರಿ:	ಏಜೆನ್ಸಿ	ಪ್ರಧಾನ ಕಛೇರಿ:
ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್,	ಅರ್ಜಿಗಳನ್ನು	ಎಂಪೈರ್ ಆಫ್ ಇಂಡಿಯಾ
ಕೆಂಪೇಗೌಡ ರಸ್ತೆ, ಬೆಂಗಳೂರು.	ಸ್ವಾಗತಿಸಿದೆ.	ಲೈಫ್ ಬಿಲ್ಡಿಂಗ್ ಬೋಂಬೆ

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ.ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ)

ವಸೂಲಾದ ಶೇರ್ ಮೊಬಲಗು ರೂ. ೪೦,೦೮೦, ಜಮಾ ಬಂದ ಠೇವಣಾತಿ 2,24,750 ವಸೂಲಾದ ಕ್ವೇನುನಿಧಿ 2,16,299, ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು 2,02,925.

ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ ಡಿಪಾಜಿಟ್ಟುದಾರರಿಗೆ ಅವರ ಡಿಪಾಜಿಟ್ಟು ಆಧಾರದ ಮೇಲೆ 90% ಕೊಡಲಾಗುತ್ತೆ. ನಿರಖು ಠೇವಣಾತಿಗಳಿಗೆ ಒಂದು ವರ್ಷದಿಂದ ಮೂರು ವರ್ಷಗಳ ವರೆಗೆ ಶೇಕಡ 2. ಮೂರು ವರ್ಷಗಳಿಂದ ಐದು ವರ್ಷಗಳ ವರೆಗೆ 2½. ಐದು ವರ್ಷಗಳಿಂದ ಹತ್ತು ವರ್ಷಗಳ ವರೆಗೆ 3½. ಹತ್ತು ಅದಕ್ಕಿಂತ ಮೇಲ್ಪಟ್ಟವುಗಳಿಗೆ 4½. ಸೇವಿಂಗ್ಸ್ ಬ್ಯಾಂಕ್ (on daily balance) ಡಿಪಾಜಿಟ್ಟುಗಳಿಗೆ ಶೇಕಡ 0—8—0. ವರ್ಷಕ್ಕೊಮ್ಮೆ ರಿಜಿಸ್ಟ್ರಾರರು ಲೆಕ್ಕ ಪರಿಶೋಧನೆ ಮಾಡುತ್ತಾರೆ.

"ಟ್ರಾಪಿಕಲ್"

ಪಂ. ಮೋತಿಲಾಲ್ ನೆಹರೂ, ಹಕೀಮ್ ಅಜಮಲ್‌ಖಾನ್, ಡಾ. ಯಂ. ಎ. ಅನ್ಸಾರಿ, ಸುಬಾಶ ಚಂದ್ರ ಬೋಸ್

ಮೊದಲಾದ ರಾಷ್ಟ್ರೀಯ ಧುರೀಣರಿಂದ ಸ್ಥಾಪಿಸಿ,

ಬೆಳೆಸಲ್ಪಟ್ಟ ರಾಷ್ಟ್ರೀಯ ವಿಮಾ ಸಂಸ್ಥೆ.

ಜೀವನ ಸಂಧ್ಯಾ ಕಾಲದಲ್ಲಿ ಜೀವವಿಮೆಯೇ ನಿಮ್ಮನ್ನು ರಕ್ಷಿಸುವದು. ಆದ್ದರಿಂದ ಹಿಂದೂ ದೇಶದ ರಾಷ್ಟ್ರೀಯ ಸಂಸ್ಥೆಗಳಲ್ಲಿ ಹಿರಿದಾದ **ಟ್ರಾಪಿಕಲಿನಲ್ಲಿ** ವಿಮೆ ಮಾಡಿರಿ.

ಮುಖ್ಯ ಏಜೆಂಟರು: ಹೊಸ ದಿಲ್ಲಿ] [ಹೆಚ್ಚಿನ ಮಾಹಿತಿಗೆ ಈ ಪತ್ತೆಗೆ ಬರೆಯಿರಿ:

ಯಂ. ಯು. ಅಚ್ಚಣ್ಣ, . . ಯಂ. ರಂಗನಾಥಶೆಟ್ಟಿ,

37) ಮಡಿಕೇರಿ. OR ಬ್ರಾಂಚ್ ಮೇನೇಜರ್, ಮಂಗಳೂರು.

— ಕೊಡಗು ಕಸ್ತೂರ್ಬಾ ಸ್ಮಾರಕ ನಿಧಿ —

ಕೊಡಗಿನಲ್ಲಿ ರೂ. 14,370 ಸಂಗ್ರಹವಾಯಿತು

ಶ್ರೀಗಳಾದ ಸಿ. ಯುಂ. ಪೂಣಚ್ಚ,	100
ಗುರಪ್ಪ ಬಿ.	75
ಮೂದವಾನಂದ ಸ್ವಾಮಿ,	50
ಪಾಲೇಕಂಡ ಐಯ್ಯಮ್ಮ,	50
ಬೊಳ್ಳಿರ ಚಂಗಪ್ಪ,	50
ಗಾಂಧಿ ಭವನ,	40
ಎಂ. ಎ. ಹಮಿದ್‌ಖಾನ್,	30
ಐಚೆಟ್ಟಿರ ಉತ್ತಯ್ಯ,	25
ಲೇಟ್ ಕೂತಂಡ ಜೋಯಪ್ಪ,	25
ಮಿಸೆಸ್ ಚಿಪ್ಪುಡೀರ ಮುದ್ದಪ್ಪ,	25
ವಿಕ್ಟೋರಿಯಾ ಕ್ಲಬ್,	25
ದೇಂಗೋಡಿ ಬೋಜಪ್ಪ,	25
ಮಿಸೆಸ್ ಬಿಟ್ಟಿಯಂಡ ಕುಟ್ಟಪ್ಪ,	25
ಮಂಡೇಪಂಡ ಬಿ. ಮೂದಪ್ಪ,	25
ಬಡುವಮಂಡ ಮಂದಣ್ಣ,	25
ಎಂ. ಬಿ. ಮೂದಪ್ಪ,	25
ತೋಟಂಬೈಲು ಮೂದಪ್ಪ,	25
ಪಿ. ಜಿ. ಮುದ್ದಮ್ಮಯ್ಯ,	25
ಕುಂದಳ್ಳಿ ಚಂಗಪ್ಪ,	20
ಪೊಡನೋಳಂಡ ಭೀಮಯ್ಯ,	20
ಕೋದಾಂಡ ಎಸ್. ನಂಜಪ್ಪ,	20
ಮನೆಯಪಂಡ ಗಣಪತಿ,	20
ಮಿಸೆಸ್ ಪಾಂಡಂಡ ಚಂಗಪ್ಪ,	20
ಪಟ್ಟಮೂಡ ಬಿ. ಮೇದಪ್ಪ,	15
ದಕ್ಷಿಣ ಕೊಡಗು ಸಹಕಾರ ಸ್ಟೋರ್	15
ಸಿ. ಸಿದ್ದಪ್ಪ,	15
ಕಾಕಮೂಡ ಗಣಪತಿ & ಬ್ರದರ್ಸ್	15
ಪಟ್ಟಮೂಡ ಐಯ್ಯಣ್ಣ	15
ತಿರುವಂಗಡಂ ಪಿಳ್ಳೆ,	12
ನೈಯಣಿರ ನಂಜಪ್ಪ,	10
ಪೊಡನೋಳಂಡ ಸೋಮಣ್ಣ,	10
ಎನ್. ಅಬ್ದುಲ್ ರಝಾಕ್ & ಸನ್ಸ್,	10
ಕೋದಾಂಡ ಎಸ್. ಕಾರ್ಯಪ್ಪ,	10
ಮೂಣಿ ಅಬ್ದುಲ್ ಕಾದರ್ ಸಾಹೇಬ್,	
ಹಸನ್ ಸಾಹೇಬ್ & ಸನ್ಸ್	10
ಹಾಜಿ ಮಮ್ಮಿ & ಸನ್ಸ್	10
ಮೊಮ್ಮೀನ್ ಅಬ್ದುಲ್ ಖಾದರ್	
ಸಾಹೇಬ್ & ಮಮ್ಮದ್ ಸಾಹೇಬ್,	10
ಪಿ. ಪಿ. ಕುಂಞಮಮ್ಮದ್,	10
ಚೇಂದಂಡ ಮುತ್ತಣ್ಣ	10
ಬಿಟ್ಟಿಯಂಡ ಮಿಸೆಸ್ ಉತ್ತಯ್ಯ,	10
ಮೂಳೇರ ಮೂಚವ್ವ,	10
ರಾ. ಬ. ಶ್ರೀಪತಿರಾವ್,	10
ಮಿಸೆಸ್ ಮನೆಯಪಂಡ ಉತ್ತಪ್ಪ,	10
ಸಂವಾದಕ ಜನ್ಮಭೂಮಿ,	8
ಜಮ್ಮಡ ಮೂದಪ್ಪ,	7

ರೂ. 5 ಕೊಟ್ಟವರು.

ಶ್ರೀಗಳಾದ ಬಡ್ಡಿರ ಪೊನ್ನಪ್ಪ, ನೆಕವಂಡ ಅಚ್ಚಯ್ಯ, ತೆಕ್ಕಡ ಮುತ್ತಪ್ಪ, ಎನ್.ಎಸ್. ಕುಟ್ಟಪ್ಪ, ಮಣವಟ್ಟಿರ ಚಿಣ್ಣಪ್ಪ, ವಕ್ಕಲಿಗರ ಕೆಂಪಯ್ಯ, ವಕ್ಕಲಿಗರ ಕರಿಯಪ್ಪ, ಅಬ್ದುಲ್ ನಬ್ಬ, ತಬ್ಬುಲ್ ರಹಿಮೂನ್, ಮೂಪಿಳ್ಳೆ ಬೆಳಮನುಮ್ಮದೆ, ಮೂಪಿಳ್ಳೆ ಕರಿಮುಮ್ಮದೆ, ಕುಂಞಂಬು, ಕುಟ್ಟಂಡ ಊಟ್ಟಪ್ಪ, ಕುಟ್ಟಂಡ ಸೋಮಯ್ಯ, ಕುಪ್ಪಂಡ ಗೌಪತಿ, ಅಮ್ಮಣಕುಟ್ಟಂಡ ಕುಶಾಲಪ್ಪ, ಪುಂಡಂಡ ಮಂದಣ್ಣ, ಎಸ್. ಮೊಯಿದಿನ್ ಸಾಹೇಬ್ ಎ. ಪಿ. ಅಬುಬಕರ್, ಬಾಡಗರಕೇರಿ ಸಂಘ, ಸಂಗಾರು ಮುತ್ತಣ್ಣ, ಮೂಸ್ಟರ್ ಮಂದಣ್ಣ, ಕೊಡಂದೆರ ಮೂಚಯ್ಯ, ಪಿ. ಎಂ. ನಾಣಮ್ಮಯ್ಯ, ಪಟ್ಟಮೊಡ ತಂಗಮ್ಮ, ಎನ್. ಸೋಮಣ್ಣ, ಡಾ, ಎಂ. ಎ. ಚಂಗಪ್ಪ, ಪೊನ್ನಿಮಾಡ ಮೂಚಯ್ಯ, ಐ. ಪಿ. ಮೂಚಯ್ಯ, ಚರಮೂರ್ತಿ ಮಹಂತಪ್ಪ, ಪೂಜೆಟ್ಟಿರ ಮುತ್ತಣ್ಣ, ಹಿತಚಿಂತಕರು, ಬಲ್ಯಂಡ ಪೂವಯ್ಯ, ಪೊನ್ನಚಂಡ ಮುದ್ದಪ್ಪ.

ರೂ. 4 ಕೊಟ್ಟವರು.

ಶ್ರೀಗಳಾದ ಎ. ಟಿ. ವೈದ್ಯನಾಥ, ಚೈಯ್ಯಂಡಾಣೆ ಶಾಲೆ, ಎಫ್. ಎಕ್ಸ್. ಮಿನೇಜಸ್, ಮಚ್ಚಿಯಂಡ ಐಯ್ಯಪ್ಪ & ಬ್ರದರ್ಸ್, ಸೆಂಟ್ರಲ್ ಹೈಸ್ಕೂಲು.

ರೂ. 3 ಕೊಟ್ಟವರು.

ಶ್ರೀಗಳಾದ ಕೋಡಿ ನಂಜಪ್ಪ, ಕೆ. ನರಸಿಂಹಮೂರ್ತಿ, ಕೆ. ಎ. ರಾಮಯ್ಯ, ಸೆಂಟ್ರಲ್ ಸ್ಟೋರ್ಸ್, ಕುಯ್ಯಮುಡಿ ದವಸ ಭಂಡಾರ, ಸಣ್ಣಪುಲಿಕೋಟು ದವಸ ಭಂಡಾರ, ತವಕಲ್ ಸ್ಟೋರ್ಸ್, ಮುಕ್ಕಾಟಿರ ಸುಬ್ಬಕ್ಕಿ, ಪಿ. ಕೆ. ಪೊನ್ನಪ್ಪ, ಟಿ. ಟಿ. ಜೋಸೆಫ್, ನಾಯಕಂಡ ಸೀತಮ್ಮ, ಸಾಗರಿ ಶ್ರೀ ಸಾದಪ್ಪ, ಅಬ್ದುಲ್ಲಾಖಾನ್ ಮತ್ತು ಅಬ್ದುಲ್ ಗಫೂರ್ ಎ. ಪಿ. ಪೋಕು ಬಿ. ಟಿ. ಕುಟ್ಟಪ್ಪ ಹಳ್ಳಿಗಟ್ಟು ಭದ್ರಕಾಳಿದೇವರು ಎನ್. ಎಸ್. ರಾಮದಾಸ್ ಎಂ. ಟಿ. ಕುಟ್ಟಪ್ಪ.

ರೂ. 2 ಕೊಟ್ಟವರು.

ಶ್ರೀಗಳಾದ ಎಂ. ಅಂದಮ್ಮಯ್ಯ, ಕೆ. ಎಸ್. ಮೂರ್ತಿ, ಸಿ. ಎಸ್. ತಮ್ಮಯ್ಯ, ಕೆ. ನರಸಿಂಹನಾಯಕ, ಪಾಣತಲೆ ಬಣ್ಣಪ್ಪ, ದೇಂಗೋಡಿ ಕೃಷ್ಣಪ್ಪ, ಕೆ. ಮಹಮ್ಮದ್‌ಗೌಸ್, ವಿ. ಎಸ್. ಚಕ್ಕಪಾಣಿ ಶೆಟ್ಟಿ, ಎಸ್. ಎನ್. ನೂಳಪ್ಪಶೆಟ್ಟಿ, ನೆರವಂಡ ಮಂದಣ್ಣ, ಎ. ಈರಪ್ಪ, ಎಸ್. ಕೆ. ಶ್ರೀನಿವಾಸನ್, ಕೈಬಿಲಿರ ಜೀಳ್ಯಪ್ಪ, ಮಚ್ಚಮಾಡ ಪೆಮ್ಮಯ್ಯ, ನಾರಾಯಣಶೆಟ್ಟಿ, ಅಚ್ಚುತನ, ಕೆ. ಎಸ್. ಶಾರದಮ್ಮ, ವಿ. ಅಬ್ದುಲ್ ಖುದ್ದೂಸ್, ಫ್ರೇಜರ್‌ಪೇಟೆ ಸಹಕಾರ ಕೂಟ, ನಂದರಾಮಸಿಂಗ್ & ಸನ್ಸ್, ಕೋಚನ ಸೋಮಯ್ಯ, ಟಿ. ಆರ್. ವೆಂಕಟರಮಣಾಚಾರ್, ಪಟ್ರಪಂಡ ಸೋಮವ್ವ, ಮೊಟ್ಟನ ನಂಜಪ್ಪ, ಚೇಂದ್ರಿಮಾಡ ಮುದ್ದಪ್ಪ, ಅಪಾಡಂಡ ಡಿ. ಕಾವೇರ್ಯಪ್ಪ, ಅಪಾಡಂಡ ಮಿಸೆಸ್ ಕಾವಮ್ಮ, ಕಗ್ಗೋಡು ಜಿ. ಬಿ. ಮಿಸೆಸ್. ಕೆ. ಮೊಗಪ್ಪ, ಚೈಯಂಡಾಣೆ ಮೈದು, ಸೂರ್ಯನಾರಾಯಣರಾವ್, ಬಿ. ಬಿ. ಮೂದಪ್ಪ, ಎ. ಎಂ. ಚಿಣ್ಣಪ್ಪ, ಕೆ. ಎ. ಗಣಪತಿ, ಪೆಮ್ಮಂಡ ಕುಟ್ಟಪ್ಪ, ಐ. ಜಿ. ಮೂಡಪ್ಪ, ಎಂ. ಎಂ. ಐಯ್ಯಪ್ಪ, ಐ. ಜಿ. ಪೆಮ್ಮಯ್ಯ, ಎಂ. ಬಿ. ಮುತ್ತಣ್ಣ, ಬಾಳೆಕುಟ್ಟಿರ ಮೂಚಯ್ಯ, ಕೇತಿಯಂಡ ಕುಶಾಲಪ್ಪ, ಮಿಸೆಸ್ ಪುಲಿಯಂಡ ಕುಶಾಲಪ್ಪ, ಶ್ರೀಮತಿ & ಶ್ರೀಮಾನ್ ಪಳೆಯಂಡ ತಿಮ್ಮಯ್ಯ, ಸಿ. ಡಿ. ಗಂಗವ್ವ, ಕೆ. ಎಂ. ಸುಬ್ರಾಯ, ಎಸ್. ರಂಗನಾಥರಾವ್, ಶ್ರೀಪಾದರಾವ್‌ಗಾಡ್‌ಬೋಲೆ & ಬ್ರದರ್ಸ್, ಕುಪ್ಪಂಡ ಎಸ್. ಸೀತವ್ವ, ಎಸ್. ಎಸ್. ಚಂಗಪ್ಪ, ಕುಂಜೆಟ್ಟಿರ ಪೊನ್ನವ್ವ, ಪಟ್ಟಮೂಡ ಎಂ. ಮುತ್ತಣ್ಣ, ಮುಕ್ಕಾಟಿರ ಮೇದಪ್ಪ, ಬಿ. ಪಾಂಡುರಂಗರಾವ್, ಬಿ. ಸಕರಾಣಿ, ಬಿ. ಪ್ರಮ್ಮುಶೆಟ್ಟಿ, ಜನಾರ್ದನರಾವ್, ಎ. ಎನ್. ಲಿಂಗಯ್ಯ, ಸಿ. ಎಂ. ಅಬ್ದುಲ್ಲಾ, ನೆವ್ವಲೆ ಸಹಕಾರ ಸಂಘ, ಎಸ್. ಆರ್. ಮೂರ್ತಿ, ಕೂಕಂಡ ನಂಜಪ್ಪ, ಸಿ. ಕೆ. ತಮ್ಮಯ್ಯ, ಕೆ. ಎ. ಬಾಲಕೃಷ್ಣ, ಮಿಸೆಸ್. ಕಲ್ಲುಮೂಡಂಡ ದೇವಕಿ ಮೂಚಯ್ಯ, ಕುಂದಳ್ಳಿ ಸಂಘ, ತಳ್ತರೆ ಸಂಘ, ಹಾನಗಲ್ಲು ಸಂಘ, ಚೌಡ್ಲು ಸಂಘ, ಕಿರುಗಂದೂರು ಸಂಘ, ಗೆಜ್ಜೆಹಣಕೋಡು ಸಂಘ, ಎಡೂರು ಸಂಘ, ತೋಳೂರು ಸಂಘ, ಕೆ. ಬಿ. ಶಾಂತ ಮಲ್ಲಪ್ಪ, ಮಿಸೆಸ್ ಎಂ. ಎಸ್. ಚೆರ್ಮಣ್ಣ, ಮಿಸೆಸ್. ಕೆ. ದೇವಯ್ಯ,

ಉಳಿದಿರುವ ಹೆಸರುಗಳನ್ನು ಮುಂದಿನ ವಾರ ಕೊಡಲಾಗುವುದು.